ದಿನಾಂಕ 29-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಎದುರುಗಾರರ ಪರ ಶ್ರೀ ಸಿ.ಪಿ.ಜೆ ವಕೀಲರಿಂದಃ</u>**

7. ಇಂದು ನ್ಯಾಯಾಲಯಕ್ಕೆ ಗೊಂದಿ ಗ್ರಾಮದಿಂದ ಬಂದಿರುತ್ತೇನೆ. ಮಾನ್ಯ ಶಿಕಾರಿಪುರದ ನ್ಯಾಯಾಲಯದಲ್ಲಿ ಎದುರುಗಾರನು ಸಲ್ಲಿಸಿದ್ದ ಎಂ. ಸಿ. ಸಂಃ 32/2022 ರ ಪ್ರಕರಣದಲ್ಲಿ ಯಾವ ಆದೇಶ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣವನ್ನು ಯಾವ ಕಾರಣಕ್ಕೆ ಸಲ್ಲಿಸಲಾಗಿದೆ ಎಂದು ನಾನು ವೈಯಕ್ತಿಕವಾಗಲೀ ಅಥವಾ ವಕೀಲರ ಮೂಲಕವಾಗಲೀ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂಬ ಸೂಚನೆಗೆ ಸಾಕ್ಷಿಯು ನನಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಎಂ .ಸಿ ಸಂಃ 32/2022 ರ ಪ್ರಕರಣವನ್ನು ಎದುರುಗಾರನು ದಾಖಲಿಸಿದ ನಂತರ ನನಗೆ ನೋಟೀಸು ಬಂದ ಕೂಡಲೇ ಈ ಪ್ರಕರಣವನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನೊಂದಿಗೆ ವೈವಾಹಿಕ ಜೀವನವನ್ನು ಮುಂದುವರೆಸುವ ಸದುದ್ದೇಶದಿಂದ ಎದುರುಗಾರನು ಸದರಿ ಎಂ.ಸಿ ಸಂಃ 32/2022 ರ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿಯೇ ವೈವಾಹಿಕ ಜೀವನವನ್ನು ಮುಂದುವರೆಸಲು ತನ್ನನ್ನು ಸೇರಿಕೊಳ್ಳುವಂತೆ ಎದುರುಗಾರನು ನನಗೆ ವಕೀಲರ ಮೂಲಕ ನೋಟೀಸನ್ನು ನೀಡಿದ್ದರೂ ನಾನೇ ಆತನೊಂದಿಗೆ ವೈವಾಹಿಕ ಜೀವನವನ್ನು ಮುಂದುವರೆಸಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

8. ಎಂ. ಸಿ ಸಂಃ 32/2022 ರ ಪ್ರಕರಣದಲ್ಲಿ ಆದ ಆದೇಶವನ್ನು ಪ್ರಶ್ನಿಸಿ ನಾನು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಮೇಲ್ಮನವಿಯನ್ನು ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ. ಎದುರುಗಾರನು ಆತನ ತಂದೆ ತಾಯಿಗೆ ಒಬ್ಬನೇ ಮಗ ಎಂದರೆ ಸರಿ. ಇಂದಿಗೂ ಸಹ ಎದುರುಗಾರನು ನಾನು ಸರಿಯಾದ ರೀತಿಯಲ್ಲಿ ಆತನೊಂದಿಗೆ

ಸಾಂಸಾರಿಕ ಜೀವನ ನಡೆಸಿದ್ದಲ್ಲಿ ನನ್ನೊಂದಿಗೆ ಜೀವನ ಮುಂದುವರೆಸಲು ತಯಾರು ಇದ್ದಾನೆ ಎಂದರೆ ಸಾಕ್ಷಿಯು ನಾನು ಹೋಗುವುದಿಲ್ಲ ಎಂದು ನುಡಿಯುತ್ತಾರೆ. ಎದುರುಗಾರನಿಗೆ ತೊಂದರೆ ಕೊಡಲು ಸುಳ್ಳು ಸಂಗತಿಗಳನ್ನು ಕಾಲ್ಪನಿಕವಾಗಿ ಸೃಷ್ಟಿಸಿಕೊಂಡು ಸುಳ್ಳು ಅರ್ಜಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ